ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ)	ವಿವರ	ಸರ್ಕಾರಿ ಶಾಲೆ	ಖಾಸಗಿ ಶಾಲೆ	ಕಾರ್ಪೋರೇಷನ್ ಶಾಲೆ
	೧	೨	೩	೪
೧	ಪೂ. ಪ್ರಾ. ಶಾಲೆ	೧೩	೪೯	ಇಲ್ಲ
೨	ಪ್ರಾ. ಶಾಲೆಗಳು	೧೦೯	೬೫	ಇಲ್ಲ
		೧೨೨	೧೧೪	ಇಲ್ಲ

ಅ) ಈ ಬಗ್ಗೆ ಸರ್ಕಾರಕ್ಕೆ ನಿರ್ದಿಷ್ಟವಾದ ದೂರು ಬಂದಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶಿರಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಟ್ಟಡ

೧೬೪೪-ಅ. ಶ್ರೀ ಸಿ. ಪಿ. ಮಂಜಡಲಗಿರಿಯಪ್ಪ (ಶಿರಾ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆ ವಿಜೃಂಭಣೆಯಿಂದ ನಿವೇಶನವು ಕೂಡ ಆಯ್ಕೆಯಾಗಿದ್ದು ಮುಖ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಶಂಕುಸ್ಥಾಪನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸವು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಇ) ಕಟ್ಟಡದ ಕೆಲಸವನ್ನು ಪ್ರಸ್ತುತ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಬಂದಿದೆ. ದಿನಾಂಕ ೯-೧೨-೨೫ರಂದು ಶಿಲಾನ್ಯಾಸವನ್ನು ಹಾಕಲಾಯಿತು.

ಆ) ಸ್ಥಳದ ಆಯ್ಕೆಯು ವಿವಾದವಾಗಿ ಅಂದರೆ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಕಟ್ಟಬೇಕೆ ವ್ಯಾಪಾರೋತ್ಪನ್ನ ಮಾರುಕಟ್ಟೆ ಜಾಗದಲ್ಲಿ ಕಟ್ಟಬೇಕೆ ಎಂಬ ವಿವಾದದಿಂದ ವಿಳಂಬವಾಗಿದೆ.

ಇ) ಜಿಲ್ಲಾ ಪರಿಷತ್, ತುಮಕೂರು ಇವರನ್ನು ಮುಂದಿನ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುವುದು.

ಶಿವಮೊಗ್ಗ ತಾಲ್ಲೂಕಿನ ಹೊಳಲೂರಿನಲ್ಲಿ ಏತ ನೀರಾವರಿ ಯೋಜನೆ

೧೯೬೬. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ. ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕಿನ ಹೊಳಲೂರಿನಲ್ಲಿ ಏತ ನೀರಾವರಿಗೆ ಖರ್ಚಾಗಿರುವ ಹಣವೆಷ್ಟು ?

ಆ) ಸದರಿ ಏತ ನೀರಾವರಿಯಿಂದ ನೀರಾವರಿಯಾಗುವ ಭೂಮಿಯ ವಿಸ್ತೀರ್ಣವೆಷ್ಟು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಪಿತ ನೀರಾವರಿ ರಾಜ್ಯ ಸಚಿವರು).—

ಅ) ೫.೧೦ ಲಕ್ಷ ರೂಗಳು

ಆ) ೧೪೫ ಹೆಕ್ಟೇರುಗಳು.

ರಾಯಚೂರು ಗುಲ್ಬರ್ಗಾ ರಸ್ತೆ

೨೨೩೫. ಶ್ರೀ ಕೆ.ಬಿ ಶಾನಪ್ಪ (ಶಹಾಬಾದ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು–ಗುಲ್ಬರ್ಗಾ ರಸ್ತೆಯ ಅಗಲ ಹಾಗೂ ಉದ್ದವೆಷ್ಟು;

ಆ) ಈ ರಸ್ತೆಯನ್ನು ಡಾಂಬರ್ ರಸ್ತೆಯನ್ನಾಗಿ ಮಾಡಲು ಯಾವ ವರ್ಷದಲ್ಲಿ ತೆಗೆದುಕೊಳ್ಳಲಾಯಿತು ಹಾಗೂ ಈ ರಸ್ತೆಗೆ ಡಾಂಬರ್ ಹಾಕಲು ತಗಲುವ ವೆಚ್ಚವೆಷ್ಟು ;

ಇ) ಈಗ ಈ ರಸ್ತೆಯಲ್ಲಿ ಎಷ್ಟು ಕಿ. ಮೀ. ರಸ್ತೆಯನ್ನು ಟಾರ್ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ ?

ಶ್ರೀ ಎಂ. ಚಂದ್ರಶೇಖರಿರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಗುಲ್ಬರ್ಗಾ ರಾಯಚೂರಿಗೆ ಹೋಗಲು ಎರಡು ರಸ್ತೆಗಳಿವೆ.

೧. ಗುಲ್ಬರ್ಗದಿಂದ ಶಹಾಬಾದ್ ರಾವೂರ್ ಕ್ರಾಸ್, ಯಾದಗೀರ್ ಕಡೆಚೂರು, ವೇವಸಗೂರ ಹಾಗೂ ರಾಯಚೂರವರೆಗೆ ಈ ರಸ್ತೆಯ ಒಟ್ಟು ಉದ್ದವು ೧೬೩ ೫೦ ಕಿ.ಮೀ, ಇರುತ್ತದೆ (೨೨೬.೧೦ ಕಿ.ಮೀ. ಉದ್ದ ಗುಲ್ಬರ್ಗಾ ಜಿಲ್ಲೆಯಲ್ಲಿಯೂ ಮತ್ತು ೭೭ ಕಿ.ಮೀ ಆಂಧ್ರಪ್ರದೇಶದಲ್ಲಿಯೂ ಹಾಗೂ ೨೦.೪೫ ಕಿ.ಮೀ ಉದ್ದ ರಸ್ತೆ ರಾಯಚೂರು ಜಿಲ್ಲೆಯಲ್ಲಿ ಬರುತ್ತದೆ) ಈ ರಸ್ತೆಯ ಭಾಗದ ಅಗಲ ಸಹ ಸಾಧಾರಣವಾಗಿ ೭.೫೦ ಮೀ ಇರುತ್ತದೆ.

೨ ಗುಲ್ಬರ್ಗಾದಿಂದ ಶಹಾಪೂರ, ಹತ್ತಿಗೂಡೂರು, ದೇವದುರ್ಗ ಎಕ್ಲಾಸಪೂರ, ರಾಯಚೂರು ನಗರದವರೆಗೆ ಈ ಮಾರ್ಗದ ಒಟ್ಟು ಉದ್ದವು ೧೭೧ ೦೦ ಕಿ.ಮಿ ಇರುತ್ತದೆ. ಇದರಲ್ಲಿ ೧೦೫ ಕಿ.ಮಿ ಉದ್ದವು ಗುಲ್ಬರ್ಗಾ ಜಿಲ್ಲೆಯಲ್ಲಿಯೂ ಹಾಗೂ ೬೬ ಕಿ ಮಿ ರಾಯಚೂರು ಜಿಲ್ಲೆಯಲ್ಲಿಯೂ ಬರುತ್ತದೆ ಈ ರಸ್ತೆಯ ಭಾಗದ ಅಗಲ ಸಹ ಸಾಧಾರಣವಾಗಿ ೭.೫೦ ಮೀ ಇರುತ್ತದೆ.

ಆ) ಮೊದಲನೆ ರಸ್ತೆಯಲ್ಲಿ ೩೩.೬೦ ಕಿ.ಮಿ ಭಾಗಕ್ಕೆ ಡಾಂಬರು ರಸ್ತೆ, ಹಾಕಲು ೮೨–೮೩ರಲ್ಲಿ ಅಂದಾಜನ್ನು ಮಂಜೂರು ಮಾಡಲಾಯಿತು. ೧೯೮೪–೮೫ರಲ್ಲಿ ಇನ್ನು ೭ ಕಿ ಮಿ ಉದ್ದ ಡಾಂಬರು ಹಾಕಲು ೧೦ ಲಕ್ಷ ರೂಗಳ ಅಂದಾಜಿಗೆ ಮಂಜೂರಾತಿ ಕೊಡಲಾಗಿದೆ. ಕೆಲಸ ಪ್ರಗತಿಯಲ್ಲಿದೆ ಈ ರಸ್ತೆಯ ಉಳಿದ ೫೮.೬ ಕಿ.ಮೀ ಭಾಗಕ್ಕೆ ಡಾಂಬರು ಹಾಕಲು ಸುಮಾರು ೯೦ ಲಕ್ಷ ರೂಗಳು ಬೇಕಾಗುತ್ತದೆ. ಎರಡನೆಯ ರಸ್ತೆಯಲ್ಲಿ ಒಟ್ಟು ೧೭೧ ಕಿ.ಮೀ ಉದ್ದದಲ್ಲಿ ೧೭೦ ಕಿ.ಮೀ ಭಾಗ ಡಾಂಬರು ರಸ್ತೆಯಾಗಿದೆ ಇನ್ನೊಂದು ಕಿ.ಮೀ ಪ್ರಗತಿಯಲ್ಲಿದೆ.

ಇ) ೧. ಗುಲ್ಬರ್ಗದಿಂದ ಶಹಾಬಾದ್ ರಾವೂರ ಕ್ರಾಸ್ ಯಾದಗಿರಿ ಮೂಲಕ ಗುಲ್ಬರ್ಗ ಲೋಕೋಪಯೋಗಿ ಇಲಾಖೆ ವಿಭಾಗದ ಗಡಿಯವರೆಗಿನ ರಸ್ತೆಯ ೧೨೬ ೦೦ ಕಿ.ಮೀ ದಲ್ಲಿ ೬೭.೫೦ ಕಿ.ಮೀ ಉದ್ದದ ರಸ್ತೆಗೆ ಡಾಂಬರ್ ಮಾಡಲಾಗಿದೆ. (೫.೫ ಕಿ ಮೀ ಕೆಲಸ ಪ್ರಗತಿಯಲ್ಲಿದ್ದುದು ಸೇರಿ) ಉಳಿದ ೫೮.೬೦ ಕಿ ಮೀ. ಉದ್ದದ ರಸ್ತೆಗೆ ಡಾಂಬರ್ ಮಾಡಬೇಕಾಗಿದೆ. ಮುಂದೆ ಆಂಧ್ರಪ್ರದೇಶದಲ್ಲಿ ಹಾಯುತ್ತಿರುವ ಸದರಿ ರಸ್ತೆಯ ೧೭ ಕಿ.ಮೀ ಉದ್ದದ ಪೈಕಿ ೧೬ ಕಿ ಮೀ ಡಾಂಬರ್ ಈಗಾಗಲೇ ಮಾಡಲಾಗಿದೆ. ೧ ಕಿ ಮೀ ಉದ್ದ ರಸ್ತೆ ಡಾಂಬರು ಮಾಡಬೇಕಾಗಿದೆ. ನಂತರ ರಾಯಚೂರು ಜಿಲ್ಲೆಯಲ್ಲಿ ಹಾಯುತ್ತಿರುವ ಸದರಿ ರಸ್ತೆಯ ಉದ್ದ ೨೦.೪೦ ಕಿ.ಮೀ ಪೂರ್ತಿ ಉದ್ದ ಈಗಾಗಲೇ ಡಾಂಬರು ಮಾಡಲಾಗಿದೆ.

೨. ಗುಲ್ಬರ್ಗದಿಂದ ಶಹಾಪೂರ್ ಹತ್ತಿಗೂಡೂರು ಮೂಲಕ ಗುಲ್ಬರ್ಗ ಲೋಕೋಪಯೋಗಿ ಇಲಾಖೆ ವಿಭಾಗದ ಗಡಿಯವರೆಗಿನ ಒಟ್ಟು ಉದ್ದ ೧೦೫ ಕಿ.ಮೀ ಇದರಲ್ಲಿ ೨೦೪ ಕಿ.ಮೀ ರಸ್ತೆಯ ಉದ್ದಕ್ಕೆ